

ಕಳೆದ ತಿಂಗಳು ಧರ್ಮಸ್ಥಳಕ್ಕೆಂದು ಹೋದಾಗ ಆ ಜಿಲ್ಲೆಯ ಹಳೆಯ ಸ್ನೇಹಿತನೊಂದಿಗೆ ಹಸಿರು ತುಂಬಿದ ಹಳ್ಳಿ ಗುಡ್ಡೆಗಳಲ್ಲಿ ಎಲ್ಲೆಂದರಲ್ಲಿ ಸುತ್ತಾಡುವಾಗ ಪರಿಸರವೊಂದು ಗಮನ ಸೆಳೆಯಿತು.

ಕೆಲವು ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಹೊಸ ಸೇತುವೆಯದು. ಎರಡೂ ಕಡೆಗಳಲ್ಲಿ ಇಳಿಜಾರಿನಿಂದ ಕೂಡಿದ ರಸ್ತೆ. ಸೇತುವೆಯ ಮೇಲೆ ನಿಂತರೆ ಭೋರ್ಗರೆದು ಹರಿಯುವ ನೀರಿನ ದೃಶ್ಯ. ವಾಹನಗಳ ಸದ್ದು ಕೂಡ ಕೇಳಿಸದಂತೆ ಹರಿಯುವ ಜಲಧಾರೆಯ ವೈಭವ ಅತ್ಯಂತ ಸುಂದರ, ನಯನ ಮನೋಹರ.

ಇದು ಇಳಂತಿಲ – ಬಂದಾರು – ಉಜಿರೆ ರಸ್ತೆಯಲ್ಲಿ ಉಪ್ಪಿನಂಗಡಿಯಿಂದ 20 ಕಿಲೋಮೀಟರು ದೂರದ ಕುಂಟಾಲು ಪಲ್ಕೆಯ ಪೆರಡಾಲ ಹೊಳೆಯ ನಿಸರ್ಗ ವೈಭವ. ಪ್ರಕೃತಿಯ ಸೊಬಗನ್ನು ಆಸ್ವಾದಿಸಲು ಹೇಳಿ ಮಾಡಿಸಿದ ಸ್ಥಳ. ಪ್ರಕೃತಿ ಪ್ರಿಯರಿಗಂತೂ ಖುಷಿ ಹೆಚ್ಚಿಸುವ ಸ್ಥಳ. ಛಾಯಾಗ್ರಾಹಕರಿಗೆ ಅಚ್ಚುಮೆಚ್ಚಿನ ತಾಣ. ಮಳೆಗಾಲದ ಈ ದಿನಗಳಲ್ಲಿ ನೀರು ರಭಸದಿಂದ ಹರಿದು ಬರುವ ದೃಶ್ಯ ಮನಮೋಹಕ. ಸುತ್ತಮುತ್ತಲ ಹಸಿರು ತಾಣ ನೋಡಲು ಎರಡು ಕಣ್ಣು ಸಾಲದು.

ನೀರು ನೊರೆ ನೊರೆಯಾಗಿ ಕಲ್ಲುಗಳ ಮಧ್ಯೆ ಚಿಮ್ಮಿ ಬರುವಾಗ ಹೊಳೆಯ ಸೌಂದರ್ಯ ಅನನ್ಯ. ನೋಡುತ್ತಿದ್ದರೆ ಸಮಯ ಹೋದುದರ ಅರಿವೆಯೇ ಆಗದು– ಯಾವುದೋ ಜಲಪಾತದ ಬಳಿ ನಿಂತಂತೆ. ವಾಹನಗಳ ಓಡಾಟವೂ ವಿರಳವಾಗಿರುವುದರಿಂದ ಪ್ರಕೃತಿ ಸೌಂದರ್ಯ ಆರಾಧಕರಿಗೆ ರಮಣೀಯ ಸ್ಥಳ.

ಸೇತುವೆಯ ಕೆಳಭಾಗದಲ್ಲಿ ಪೆರಡಾಲ ಹೊಳೆ ಹರಿಯುವಲ್ಲಿ ಸಹಜವಾಗಿಯೇ ಬೆಳೆದು ಬಂದಿರುವ ಗಿಡಮರಗಳನ್ನು ಪುಟ್ಟ ಪುಟ್ಟ ದ್ವೀಪಗಳನ್ನಾಗಿಸಿ ನೀರು ರಭಸದಿಂದ ಮುಂದೆ ಸಾಗುತ್ತದೆ. ಇಲ್ಲಿಂದ ಒಂದು ಕಿಲೋಮೀಟರು ದೂರದಲ್ಲಿ ನೇತ್ರಾವತಿ ನದಿಯನ್ನು ಸೇರುತ್ತದೆ. ಹತ್ತಿರದಲ್ಲಿ ಎಲ್ಲೂ ಉಪಹಾರದ ವ್ಯವಸ್ಥೆ ಇಲ್ಲ. ಮನೆಯಿಂದ ಊಟ– ತಿಂಡಿ ಕಟ್ಟಿಕೊಂಡು ಹೋದರೆ ಅಲ್ಲಿ ಇಡೀ ದಿನ ಕಳೆಯಬಹುದು. ■

ಹೆಸರುಗಳಿವೆ. ಬರ್ಲೇರಿಯ ಕ್ರಿಸ್ಟಾಟ ಎಂಬ ವೈಜ್ಞಾನಿಕ ಹೆಸರಿರುವ ಇದು ‘ಅಕಾಂತಸೀ’ ಸಸ್ಯ ಕುಟುಂಬಕ್ಕೆ ಸೇರಿದೆ. ಗಿಡ ಪೊದೆಯಾಕಾರದಲ್ಲಿದ್ದು ಸುಮಾರು 60ರಿಂದ 100 ಸೆಮೀ ಎತ್ತರ ಬೆಳೆಯುತ್ತದೆ. ಐದು ಸೆಮೀ ಉದ್ದದ ಹೂವು ಬಿಡುತ್ತದೆ. ಹಣ್ಣುಗಳು 1.5 ಸೆಮೀ ಇರುತ್ತದೆ.

**ಔಷಧೀಯ ಗುಣಗಳು**

ಗೊರಟಿಗೆ ಗಿಡ ಔಷಧೀಯ ಗುಣಗಳನ್ನೂ ಹೊಂದಿರುವ ಸಸ್ಯ. ಇದರ ನಿರ್ವಹಣೆಗೆ ಹೆಚ್ಚಿನ ಶ್ರಮ ಬೇಕಾಗಿಲ್ಲ. ರಸಗೊಬ್ಬರ, ಸದಾ ನೀರು, ನೆರಳು ವಿಶೇಷ ಆರೈಕೆ ಬಯಸದ ವಿಶಿಷ್ಟ ಸಸ್ಯ ಹೂವಿನ ಸೌಂದರ್ಯದ ಜತೆಗೆ ಔಷಧಕ್ಕೂ ಬಳಕೆಯಾಗುತ್ತದೆ.

ಗೊರಟಿಗೆ ಗಿಡದ ಎಲೆಯನ್ನು ಹಲ್ಲುನೋವು ಮತ್ತು ಸಂಧಿವಾತ ನಿವಾರಣೆಗೆ ಬಳಸುತ್ತಾರೆ. ಈ ಗಿಡದ ಬೇರು ಸಹ ಕೀಲು ನೋವು ನಿವಾರಣೆಗೆ ಸಹಕಾರಿ. ಗೊರಟಿಗೆ ಗಿಡದ ಎಲೆಯನ್ನು ಕೆಮ್ಮು, ಕಿವಿನೋವು ಮತ್ತು ಹಿಮ್ಮಡಿ ಒಡೆದ ನೋವುಗಳಿಗೆ ಪರಿಹಾರವಾಗಿ ಬಳಸುವುದಿದೆ.

ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಯಥೇಚ್ಛವಾಗಿ ಹೂವು ಬಿಡುತ್ತದೆ. ಉಳಿದ ಕಾಲಗಳಲ್ಲಿ ಹೂವು ಬಿಡುವ ಸಂಖ್ಯೆ ಕಡಿಮೆ. ಮನೆಯಂಗಳದಲ್ಲಿ ಇರಲೇ ಬೇಕಾದ ಈ ಗಿಡ ಕೆಲವೆಡೆ ಅಳಿವಿನ ಅಂಚಿನಲ್ಲಿ ಇದ್ದು, ಉಳಿಸಿ ಬೆಳೆಸಬೇಕಾದ ಅನಿವಾರ್ಯತೆಯೂ ಇದೆ. ■

